BHIMAPPA SOMAPPA NAVI
Digitally signed by BHIMAPPA SOMAPPA NAVI
DN: c=IN, o=KARNATAKA STATE AKKAMAHADEVI WOMENS UNIVERSITY VIJAYAPURA, ou=NA, 2.5.4.20=db7789db39afe1f3d852b09ea34974 99328f50a9eb82c5e3eb9b8da79cde486e, postalCode=586108, st=KARNATAKA, serialNumber=a2019af0af54b531e19e9c7b6fb d664dec1569beb802de3505e28213b85e6333, cn=BHIMAPPA SOMAPPA NAVI
Date: 2023.08.12 15:10:43 +05'30'



# NAAC II CYCLE – SSR: Criteria 7:

# 7.1.9: Constitutional Obligations

# Other Related Programs

ವಿಜಯವಾಣಿ ದಿ೦೭-೧೨-೨೦೧೭ ಪು-೪

701.9(20)

# ಸಮಾನತೆ ಹರಿಕಾರ ಡಾ. ಅಂಬೇಡ್ಕರ

## ಪ್ರಬುದ್ಧ ಭಾರತ ನಿರ್ಮಾಣದ ಸಂಕಲ್ಪ ದಿನ । ಮಹಿಳಾ ವಿವಿಯಲ್ಲಿ ವಿಶೇಷ ಉಪನ

Event: Special Lecture on resolution day
Date: 07/12/2017
Dept: SC/ST cell
Res. person: Prof I S Vidyasagar

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಶೋಷಿತ ಸಮುದಾಯಕ್ಕೆ ಮಾನವೀಯ ಹಕ್ಕು ಕೊಡಲು ಹೋರಾಡಿದವರು ಅಂಬೇಡ್ಕರ್. ಅವರು ಎಷ್ಟೋ ಉನ್ನತ ಹುದ್ದೆಗಳನ್ನು ತಿರಸ್ಕರಿಸಿ ಸಮಾಜದಲ್ಲಿ ಸಮಾನತೆಯನ್ನು ತರಲು ಹಗಲಿರುಳು ಶ್ರಮಿಸಿದರು ಎಂದು ಕಲಬುರ್ಗಿಯ ಡಾ.ಬಿ.ಆರ್. ಅಂಬೇಡ್ಕರ್ ಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಐ.ಎಸ್. ವಿದ್ಯಾಸಾಗರ ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿವಿ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪಜಾ-ಪಪಂ ಘಟಕ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 61ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಪ್ರಬುದ್ಧ ಭಾರತ ನಿರ್ಮಾಣದ ಸಂಕಲ್ಪ ದಿನ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಅವರು ಮಾತನಾಡಿದರು.

> ಮಹಿಳೆಯ ರಿಂದ ದೇಶ ಪ್ರಬುದ್ಧವಾಗಲು ಸಾಧ್ಯ

ಅಂಬೇಡ್ಕರ್ ಅವರು ಅಸ್ಪೃಶ್ಯತೆಯನ್ನು ಕೇಳಿ ತಿಳಿದವರಲ್ಲ, ಅನುಭವಿಸಿ ತಿಳಿದವರಾಗಿದ್ದರು. ಬೇರೆಯವರಿಗೆ ಅದರ ಪ್ರಖರತೆ ತಿಳಿಯುವುದಿಲ್ಲ ಎಂದರು. ಒಂದು ಕಡೆ ಹೆಣ್ಣನ್ನು ದೇವತೆ ಎನ್ನುತ್ತಾರೆ, ಇನ್ನೊಂದೆಡೆ ಅವಳನ್ನು ಭೋಗದ ವಸ್ತು ಎಂದು ಹೇಳುತ್ತಾರೆ. ಆದರೆ ಹೆಣ್ಣು ಸ್ವತಂತ್ರ ಜೀವ ಎಂದು ಯಾರೂ ಹೇಳಲಿಲ್ಲ. ಆದರೆ ಅಂಬೇಡ್ಕರ್ ಕೇವಲ ಅಸ್ಪೃಶ್ಯರಿಗಾಗಿ ಅಲ್ಲದೇ ಮಹಿಳೆಯರಿಗಾಗಿಯೂ ಹೋರಾಟ ಮಾಡಿದ್ದಾರೆ. ಮಹಿಳೆಯರಿಗೆ ಹೆರಿಗೆ ರಜೆ ಮತ್ತು ಭತ್ಯೆಗಾಗಿ ಹೋರಾಡಿದ ಮೊದಲ ಭಾರತೀಯ ಅಂಬೇಡ್ಕರ್ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ.ಎಲ್. ಆರ್. ನಾಯಕ ಮಾತನಾಡಿ, ದೇಶ ಪ್ರಬುದ್ಧವಾಗಬೇಕಾದರೆ ಮಹಿಳೆಯರಿಂದಲೇ ಸಾಧ್ಯ. ಬದಲಾವಣೆ ಆಗಬೇಕಾದರೆ ಅದು ಮಹಿಳೆಯರಿಂದ ಮಾತ್ರ ಸಾಧ್ಯ ಎಂದು ವಿದ್ಯಾರ್ಥಿನಿಯರಿಗೆ ಹೇಳಿದರು. ಭಾರತ ಬಡರಾಷ್ಟ್ರ ಆದರೆ ವೈಜ್ಞಾನಿಕವಾಗಿ ನೋಡಿದರೆ ನಮ್ಮಷ್ಟು ಶ್ರೀಮಂತ ರಾಷ್ಟ್ರ ಯಾವುದೂ ಇಲ್ಲ ಎಂದರು. ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ-ಬೋಧಕೇತರ ಸಿಬ್ಬಂದಿ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಸಂಗೀತ ವಿಭಾಗದ ವಿದ್ಯಾರ್ಥಿನಿಯರು, ಬುದ್ಧವಂದನೆ ಮಾಡಿದರು. ಡಾ. ಸಕ್ಪಾಲ್ ಹೂವಣ್ಣ ಸ್ವಾಗತಿಸಿದರು. ಸಂಶೋಧನಾ ವಿದ್ಯಾರ್ಥಿನಿ ಸಾವಿತ್ರಿ ಪರಿಚಯಿಸಿದರು. ಭುವನೇಶ್ವರಿ ಕಾಂಬಳೆ ನಿರೂಪಿಸಿದರು. ಅರ್ಶಿಯಾ ಕೊಟ್ನಾಳ ವಂದಿಸಿದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ನಡೆದ ಪ್ರಬುದ್ಧ ಭಾರತ ನಿರ್ಮಾಣದ ಸಂಕಲ್ಪ ದಿನ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಪ್ರೊ. ಐ. ಎಸ್. ವಿದ್ಯಾಸಾಗರ ಚಾಲನೆ ನೀಡಿದರು.

### ನಾಲತವಾಡ ಪಪಂ

ನಾಲತವಾಡ: ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 61ನೇ ಮಹಾ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.



ಡಾ.ಬಿ.ಆರ್. ಅಂಬೇಡ್ಕರ್ 61ನೇ ಮಹಾ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ಪಪಂ ಅಧ್ಯಕ್ಷ ಪೃಥ್ವಿರಾಜ ನಾಡಗೌಡ, ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಮುಖ್ಯಾಧಿಕಾರಿ ಮಾರುತಿ ನಡುವಿನಕೇರಿ, ಉಪಾಧ್ಯಕ್ಷ ವೀರೇಶ ಚಲವಾದಿ, ಸದಸ್ಯರಾದ ಭೀಮಣ್ಣ ಗುರಿಕಾರ, ಲತಾ ಸಿದ್ದಪ್ಪ ಕಟ್ಟಿಮನಿ, ಬಾಲಚಂದ್ರ ಗದಗಿನ್, ಡಿಎಸ್ಎಸ್ ಮುಖಂಡ ಹನುಮಂತ ಚಲವಾದಿ ಉಪಸ್ಥಿತರಿದ್ದರು.

### ಮಾದಿಗರ ಸಂಘ

ವಿಜಯಪುರ: ಇಲ್ಲಿನ ಕರ್ನಾಟಕ ಮಾದಿಗರ ಸಂಘದ ವತಿಯಿಂದ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರರವರ 61ನೇ ಮಹಾ ಪರಿನಿರ್ವಾಣ ದಿನಾಚರಣೆ ಆಚರಿಸಲಾಯಿತು. ಸಂಘದ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ಮುದ್ದು ಮಾದರ (ಮಮದಾಪೂರ) ಮಾತನಾಡಿ, ದಲಿತರ ಬಂಧು, ಭಾರತರತ್ನ, ವಿಶ್ವಮಾನವ, ಭಾರತೀಯ ಜನರಿಗೆ ಕಾನೂನು ಸ್ವಾತಂತ್ರ್ಯ ಕೊಟ್ಟು, ವಿಶ್ವವೇ ಮೆಚ್ಚುವಂತಹ ಸಂವಿಧಾನ ಬರೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರರವರು ನಮ್ಮನ್ನೆಲ್ಲ ಬಿಟ್ಟು 61 ವರ್ಷಗಳು ಕಳೆದವು. ಆದರೆ ಅವರು ಹಾಕಿಕೊಟ್ಟ ಮಾರ್ಗದರ್ಶನ ಇಂದಿಗೂ ಮಾದರಿಯಾಗಿವೆ ಎಂದರು. ಜಿಲ್ಲಾಧ್ಯಕ್ಷ ಶ್ರೀಶೈಲ ರತ್ನಾಕರ, ಉಪಾಧ್ಯಕ್ಷರಾದ ಸುಶಾಂತೇಶ ಕಾಖಂಡಕಿ, ಮಲ್ಲು ತೇಜಗಿರಿ, ಆಕಾಶ ಮನಗೂಳಿ ಪಾಲ್ಗೊಂಡಿದ್ದರು.

### ವೃತ್ತ ನವೀಕರಣಕ್ಕೆ ಕೋಟಿ ರೂ.

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ವಿಜಯಪುರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು. ಸಚಿವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸಮಾನತೆ, ಸಮತೆ, ಸಹೋದರತ್ವ ಹಾಗೂ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಅಳವಡಿಸಿದರು. ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರು ಚಿರಸ್ಮರಣೀಯರಾಗಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ವೃತ್ತವನ್ನು ನವೀಕರಣಗೊಳಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಕೋಟಿ ರೂ.ಗಳನ್ನು ಮಂಜೂರು ಮಾಡಲಾಗುವುದು. ಡಾ.ಬಿ.ಆರ್.ಅಂಬೇಡ್ಕರ್ ಭವನದ ಪುನರ್ ನವೀಕರಣಕ್ಕೆ ರೂ.ಗಳ ಅನುದಾನವನ್ನು ಕಾಯ್ದಿರಿಸಲಾಗುವುದೆಂದು ತಿಳಿಸಿದರು.

> ಅಂಬೇಡ್ಕರ್ ಪರಿನಿರ್ವಾಣ ದಿನ

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆಝಾದ ಪಟೇಲ, ಕೆ.ಬಿ.ಶಿವಕುಮಾರ, ಜಿಪಂ ಸಿಇಒ ಎಂ.ಸುಂದರೇಶಬಾಬು, ವಿಭಾಗಾಧಿಕಾರಿ ಶಂಕರ ವಣಕ್ಯಾಳ, ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಮಹೇಶ ಪೋತದಾರ, ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ ಜಿ.ಎಂ.ದೊಡಮನಿ, ಸಮಾಜದ ಮುಖಂಡರಾದ ನಾಗಲಗ್ ನಂದಂತೆ ಇತರರು ಉಪಸ್ಥಿತರಿದ್ದರು.



ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 61ನೇ ಪರಿನಿರ್ವಾಣ ದಿನದ ಅಂಗವಾಗಿ ಸಚಿವ ಎಂ.ಬಿ. ಪಾಟೀಲ ವಿಜಯಪುರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು.

7/12/17

7.1.9(4A)

ಉದಯವಾಣಿ ದಿ ೨೭-೧-೨೦೧೯ ಪು-೨

# ಯುವ ಸಂಸತ್ ಸ್ಪರ್ಧೆ ಅವಶ್ಯ

ವಿಜಯಪುರ: ದೇಶದ ಸಂವಿಧಾನಾತ್ಮಕ ಹಾಗೂ ಪ್ರಜಾಪ್ರಭುತ್ವದ ಮಹತ್ವದ ಕುರಿತು ಯುವ ಜನರಿಗೆ ಮನವರಿಕೆ ಮಾಡಿಕೊಡಲು ಕೇಂದ್ರ ಸರ್ಕಾರ ಕಾಲೇಜು ಮಟ್ಟದಲ್ಲಿ ಯುವ ಸಂಸತ್ ಕಾರ್ಯಕ್ರಮ ರೂಪಿಸಿದೆ. ಈ ಮೂಲಕ ಯುವಜನತೆ ರಾಜಕೀಯ ಆಸಕ್ತಿ ಮೂಡಿಸಿಕೊಂಡು ಶಾಸನಸಭೆಗಳಿಗೆ ಪ್ರವೇಶಿಸುವ ಜಾಗೃತಿ ನಡೆಸಿದೆ ಎಂದು ನೆಹರು ಯುವ ಕೇಂದ್ರದ ಜಿಲ್ಲಾ ಸಂಯೋಜಕ ಡಿ.ದಯಾನಂದ ಅಭಿಪ್ರಾಯಪಟ್ಟರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ನೆಹರು ಯುವ ಕೇಂದ್ರ ಸಹಯೋಗದಲ್ಲಿ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ರಾಜಕೀಯ ವ್ಯವಸ್ಥೆ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಹೀಗಾಗಿ ಯುವ ಜನತೆ ಸಕಾರಾತ್ಮಕ ವಿಚಾರಧಾರೆಗಳಿಂದ ರಾಜಕೀಯ ಕ್ಷೇತ್ರ ಪ್ರವೇಶಿಸಬೇಕು. ಮಹಿಳೆಯರು ಇಂತಹ ವೇದಿಕೆಗಳನ್ನು ಸದ್ಬಳಕೆ ಮಾಡಿಕೊಂಡು ನೈಜ ಸಂಸತ್, ಶಾಸನ ಸಭೆ ಪ್ರವೇಶಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಸಬಿಹಾ ಭೂಮಿಗೌಡ ಮಾತನಾಡಿ, ನೈಜ ಸಂಸತ್‌ನಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಸಮರ್ಥ ವಿಷಯ ಸಂಗ್ರಹ, ಚಾತುರ್ಯದ ಮಾತುಗಾರಿಕೆಯಂತ ಗುಣಗಳನ್ನು ಮೈಗೂಡಿಸಿಕೊಳ್ಳಲ್ಲಿ ರಾಜಕೀಯ ಶಿಕ್ಷಣ ಪಡೆಯುವಲ್ಲಿ ಈ ಯುವ ಸಂಸತ್ ತಳಹದಿಯಾಗಿದೆ ಎಂದರು.

ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ। ವಿಷ್ಣು ಶಿಂಧೆ, ವಿದ್ಯಾರ್ಥಿ ಕ್ಷೇಮಪಾಲ ನಿರ್ದೇಶನಾಲಯದ ನಿರ್ದೇಶಕ ಡಾ। ಯು.ಕೆ. ಕುಲಕರ್ಣಿ, ಜಾವೇದ ಜಮಾದಾರ ಇದ್ದರು.

ಡಾ। ಅಶೋಕ ಸುರಪುರ ಪ್ರಾಸ್ತಾವಿಕ ಮಾತನಾಡಿದರು.



ವಿಜಯಪುರ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಯುವ ಸಂಸತ್ ಕಾರ್ಯಕ್ರಮಕ್ಕೆ ನೆಹರು ಯುವ ಕೇಂದ್ರದ ಡಿ.ದಯಾನಂದ ಚಾಲನೆ ನೀಡಿದರು.

ಎನ್ಎಸ್ಎಸ್ ಸಂಯೋಜಕ ಬಸವರಾಜ ಲಕ್ಕಣ್ಣವರ ಸ್ವಾಗತಿಸಿದರು. ಡಾ। ಹನುಮಂತಯ್ಯ ಪೂಜಾರಿ ನಿರೂಪಿಸಿದರು. ಡಾ। ಕಲಾವತಿ ಕಾಂಬಳೆ ವಂದಿಸಿದರು.

**ಯುವ ಸಂಸತ್ ಸ್ಪರ್ಧೆ:** ವಿವಿಯ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ವಿಶೇಷವಾಗಿ ಸಿದ್ಧಪಡಿಸಿದ್ದ ಸಂಸತ್ ಮಾದರಿಯ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ವಿವಿಯವಿವಿಧವಿಭಾಗಗಳಿಂದಮತ್ತುವಿವಿಧಕಾಲೇಜುಗಳಿಂದ ಆಯ್ಕೆಯಾದ 107 ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಪ್ರಶ್ನೋತ್ತರ ಅವಧಿಯಲ್ಲಿ ಭ್ರಷ್ಟಾಚಾರ, ಭಯೋತ್ಪಾದನೆ, ಹವಾಮಾನ ವೈಪರಿತ್ಯ, ಕ್ರೀಡೆ, ಆರ್ಥಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ವಾದ ಪ್ರತಿವಾದದೊಂದಿಗೆ ಚರ್ಚಿಸಿ, ತಮ್ಮ ವಾಕ್ ಚಾತುರ್ಯದಿಂದ ನೈಜ ಸಂಸತ್ ಕಲಾಪಗಳ ದೃಶ್ಯಾವಳಿಗಳನ್ನು ನೆನಪಿಸುವಂತೆ ಮಾಡಿದರು.

ಸ್ಪರ್ಧೆಯಲ್ಲಿ ಪರ್ವಿನ್ ಫಾತಿಮಾ ಜಮಖಂಡಿ ಪ್ರಥಮ, ವಿಶಾಲ ದ್ವಿತೀಯ ಹಾಗೂ ವಾಣಿ ಪಾಟೀಲ ತೃತೀಯ ಸ್ಥಾನ ಪಡೆದರು. ಹಸನ್ ಪಟೇಲ್ ನಾಲ್ಕು ಹಾಗೂ ಸನಾ ಅರಳಿಮಟ್ಟಿ ಐದನೇ ಸ್ಥಾನ ಪಡೆದರು.

Event :- Youth Parliament Programme

Date :- 27/1/2019 Udaya Vani Pg No -2


Dep N.S.S.

RP :- D Dayananda

ಕನ್ನಡ ಪ್ರಭ, ದಿ. ೨/೮/೨೦, ಪು.-೨

# ಆಸ್ತಿ ಹಕ್ಕು ಆರ್ಥಿಕ ಅಭಿವೃದ್ಧಿಗೆ ಸಹಾಯಕಾರಿ: ಡಾ.ಕಾಕಡೆ

## ಮಹಿಳಾ ವಿವಿಯಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಪೇಟೆಂಟ್‌ನ ಮಹತ್ವ ಹಾಗೂ ಜಾಗೃತಿ ಕಾರ್ಯಾಗಾರ



ತಿರುವನಂತಪುರದ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದ ಮಾಜಿ ವಿಜ್ಞಾನಿ ವಿ.ಪಿ. ಬಾಲಗಂಗಾಧರನ್ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ವಿಜಯಪುರ

ದೇಶದ ಆರ್ಥಿಕ ಬೆಳವಣಿಗೆಗೆ ಬೌದ್ಧಿಕ ಆಸ್ತಿ ಹಕ್ಕಿನ ಕೊಡುಗೆ ಅತ್ಯಂತ ಮಹತ್ವದ್ದಾಗಿದ್ದು, ಇದು ಜನರಿಗೆ ಹಾಗೂ ಉದ್ಯಮಿಗಳಿಗೆ ಅವರು ರಚಿಸುವ ಬೌದ್ಧಿಕ ಸರಕುಗಳು ಮತ್ತು ಮಾಹಿತಿಗೆ ಆಸ್ತಿ ಹಕ್ಕನ್ನು ನೀಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಎಂದು ಮಹಿಳಾ ವಿವಿ ಪ್ರಭಾರ ಕುಲಪತಿ ಪ್ರೊ. ಓಂಕಾರ ಕಾಕಡೆ ಹೇಳಿದರು.

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟದ ಭರವಸೆ ಕೋಶ (ಐಕ್ಯೂಎಸಿ) ಹಮ್ಮಿಕೊಂಡಿದ್ದ 'ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಪೇಟೆಂಟ್‌ನ ಮಹತ್ವ ಹಾಗೂ ಜಾಗೃತಿ' ಕುರಿತ ಒಂದು ದಿನದ ಆನ್‌ಲೈನ್ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

'ಭಾರತದಾಚೆ ೩೮ರಷ್ಟು ಪೇಟೆಂಟ್‌ಗಳನ್ನು ಅನಿವಾಸಿ ಭಾರತೀಯರು ಪಡೆಯುತ್ತಿದ್ದು, ಇದರಿಂದ ಆರ್ಥಿಕ ಹಿನ್ನಡೆಯುಂಟಾಗುತ್ತಿದೆ. ಪ್ರಸ್ತುತ ನಾವು ಈ ಸಮಸ್ಯೆಯನ್ನು ಕಡಿಮೆಗೊಳಿಸಬೇಕಾದ ಸಂಗತಿ ಎದುರಾಗಿದೆ ಎಂದು ಹೇಳಿದರು.

ತಿರುವನಂತಪುರದ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ ಮಾಜಿ ವಿಜ್ಞಾನಿ ವಿ.ಪಿ. ಬಾಲಗಂಗಾಧರನ್ ಮಾತನಾಡಿ, ಪ್ರತಿಯೊಬ್ಬ ಸಂಶೋಧಕರು ಮತ್ತು ಹೊಸ ಸಾಧನಗಳ ಸೃಷ್ಟಿಕರ್ತರು ಎಲ್ಲರೂ ಸಹ ಬೌದ್ಧಿಕ ಆಸ್ತಿ ಹಕ್ಕಿನ ಕುರಿತು ಜಾಗೃತರಾಗಿರಬೇಕು. ಅದರಂತೆ, ತಮ್ಮ ಸ್ವಂತ ಲಾಭಕ್ಕಾಗಿ ಮಾತ್ರವಲ್ಲದೇ, ಒಟ್ಟಾರೆಯಾಗಿ ದೇಶದ ಹಿತದೃಷ್ಟಿಯಿಂದ ಬೌದ್ಧಿಕ ಆಸ್ತಿ ಹಕ್ಕನ್ನು ಪಡೆದುಕೊಳ್ಳಬೇಕು' ಎಂದರು.

ಪ್ರತಿಯೊಬ್ಬ ವ್ಯಕ್ತಿಯು ಸಹ ಹೊಸ ಸಾಧನಗಳ, ಹೊಸ ಆಲೋಚನೆಗಳ ನಿರ್ಮಾತೃಗಳಾಗಿದ್ದು, ಬೌದ್ಧಿಕ ಆಸ್ತಿ ಹಕ್ಕನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸನ್ನದ್ಧರಾಗಿರಬೇಕು ಎಂದ ಅವರು, ಇಂದಿನ ದಿನಮಾನದಲ್ಲಿ ಇನ್ನೋವೇಶನ್ ಸಂಸ್ಕೃತಿಯನ್ನು ನಾವು [illegible] ಎಂದರು.

ಬೆಂಗಳೂರಿನ [illegible] ಗ್ರಂಥಾಲಯದ ಮುಖ್ಯಸ್ಥ ಡಾ. [illegible] ನಿರ್ದೇಶಕಿ [illegible] ಅಕಾಡೆಮಿಯ ಸಂಶೋಧನಾ ನಿರ್ದೇಶನಾಲಯದ ಸಂಯೋಜಕ ಪ್ರೊ. [illegible] ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಮಹಿಳಾ ವಿವಿಯ ಐಕ್ಯೂಎಸಿಯ ಸಹಾಯಕ ನಿರ್ದೇಶಕ ಡಾ. ಚಂದ್ರಶೇಖರ ಮಠಪತಿ ಸ್ವಾಗತಿಸಿ, ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಐಕ್ಯೂಎಸಿಯ ನಿರ್ದೇಶಕ ಪ್ರೊ. ಎಸ್.ಬಿ. ಕಾಮಶೆಟ್ಟಿ ವಂದಿಸಿದರು.

Event: Online webinar on Patent filing awareness.

Date: 2-8-2020

Resource person: Prof. V.P. Balagangadharan

Dept - IQAC.

2.1.9 (4A)

ವಿಜಯಕರ್ನಾಟಕ 20-2-2021 ಪು 8

# ಸಮಾನ ಹಕ್ಕು ನೀಡಿದ್ದೇ ಸಂವಿಧಾನ



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನದಡಿ ನಡೆದ ಸಂವಿಧಾನ ಓದು ಕಾರ್ಯಕ್ರಮ ಜರುಗಿತು.

**ವಿಜಯಪುರ:** ಸಂವಿಧಾನವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಭಾರತದ ಬಹುಮುಖ್ಯವಾದ ಗ್ರಂಥ ಸಂವಿಧಾನ. ಆ ಸಂವಿಧಾನವನ್ನು ನಾವು ರಕ್ಷಣೆ ಮಾಡಿದಾಗ ಮಾತ್ರ ಅದು ನಮ್ಮನ್ನು ರಕ್ಷಿಸುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ವೆಂಕಣ್ಣ ಬಿ ಹೊಸಮನಿ ಹೇಳಿದರು.

ನಗರದ ಅಕ್ಕಮಹಾದೇವಿ ಮಹಿಳಾ ವಿವಿಯ ಕನ್ನಡ ಅಧ್ಯಯನ ಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಡಾ.ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನದಡಿ ಹಮ್ಮಿಕೊಂಡಿದ್ದ ಸಂವಿಧಾನ ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತೀಯ ಎಲ್ಲ ಪ್ರಜೆಗಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನ ವ್ಯಕ್ತಿ ಗೌರವ ಏಕತ್ವ ರೂಪಿಸುವುದೇ ಸಂವಿಧಾನ. ಅದನ್ನು ನಾವು ತಿಳಿದು ಬದುಕಬೇಕು. ಪ್ರತಿಯೊಬ್ಬರಿಗೂ ಕಾನೂನಿನ ಪರಿಚಯ ಅತೀ ಅವಶ್ಯ. ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರತಿಯೊಬ್ಬರಿಗೂ ಸಮಾನ ಬದುಕು ನೀಡುವಂತಹ ಸಂವಿಧಾನವನ್ನು ನಮಗೆ ನೀಡಿದ್ದಾರೆ. ಪ್ರತಿಯೊಬ್ಬರೂ ಸಂವಿಧಾನ ಓದಬೇಕು ಮತ್ತು ಅದನ್ನು ತಿಳಿದುಕೊಳ್ಳಬೇಕು ಎಂದರು.

ವಿವಿಯ ಕುಲಸಚಿವೆ ಪ್ರೊ.ಆರ್.ಸುನಂದಮ್ಮ ಮಾತನಾಡಿ, ನಮ್ಮ ಜೀವನದಲ್ಲಿ ನಿಯಮ ಅಳವಡಿಸಿಕೊಳ್ಳಬೇಕು. ಮಹಿಳೆಯರಿಗಾಗಿ ವಿಶೇಷ ಕಾನೂನುಗಳಿದ್ದು ಆ ಕಾಯ್ದೆ ಬಳಸಿಕೊಂಡು ನ್ಯಾಯ ಕೇಳಿದಾಗ ಸಂವಿಧಾನ ಜಾರಿಗೆ ಬಂದಿದ್ದು ಸಾರ್ಥಕವಾಗುತ್ತದೆ ಎಂದರು.

ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲಾ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ನಾಮದೇವಗೌಡ, ಡಾ.ಮಲ್ಲಿಕಾರ್ಜುನ ಮಾನ್ವಡೆ, ಡಾ.ಕಲಾವತಿ ಕಾಂಬಳೆ, ಜೆನಿಫರ್ ಸೌಲಂ ಇದ್ದರು.

26/2/21

26/02/21

Event : Common Right in Constitution
Date : 20-02-2021, Vijay Karnataka, 2021, Page 8
Dept : Library Science department
Resource Person : Venkanna. B. Hosammani

7.1.9 (4A)

(4A.)

ಕನ್ನಡಪ್ರಭ, ದಿ 24/8/21, ಪು - 2.



ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲಿ ಎನ್‌ಎಸ್‌ಎಸ್.ವತಿಯಿಂದ ಮಾಜಿ ಪ್ರಧಾನಿ ದಿ.ರಾಜೀವ ಗಾಂಧಿ ಅವರ ಜನ್ಮ ದಿನೋತ್ಸವದ ಅಂಗವಾಗಿ ಸದ್ಭಾವನಾ ದಿನವನ್ನು ಆಚರಿಸಲಾಯಿತು.

# ವಿವಿಯಲ್ಲಿ ಸದ್ಭಾವನಾ ದಿನಾಚರಣೆ

• **ಕನ್ನಡಪ್ರಭವಾರ್ತೆ** ವಿಜಯಪುರ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕೋಶದ ವತಿಯಿಂದ ಮಾಜಿ ಪ್ರಧಾನಿ ದಿ. ರಾಜೀವಗಾಂಧಿ ಅವರ ಜನ್ಮ ದಿನೋತ್ಸವದ ಅಂಗವಾಗಿ ಸದ್ಭಾವನಾ ದಿನವನ್ನು ಆಚರಿಸಲಾಯಿತು. ವಿವಿಯ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಹಾಜರಿದ್ದು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

ಕುಲಸಚಿವೆ ಪ್ರೊ.ಆರ್.ಸುನಂದಮ್ಮ ಮಾತನಾಡಿ, ಪ್ರತಿಯೊಬ್ಬರು ಸದ್ಭಾವನಾ ಗುಣವನ್ನು ಬೆಳೆಸಿಕೊಳ್ಳಬೇಕು, ಸದ್ಭಾವನೆಯನ್ನು ಬೆಳೆಸಿಕೊಂಡು ದೇಶದ ಏಕತೆ, ಭಾವೈಕ್ಯತೆಯನ್ನು ರಕ್ಷಿಸುವ ದಿವ್ಯ ಸಂಕಲ್ಪ ಮಾಡಬೇಕು, ರಾಷ್ಟ್ರ ನಿರ್ಮಾಣದಲ್ಲಿ ಯುವಜನತೆ ಪಾತ್ರ ಪ್ರಮುಖ ಪಾತ್ರವಾಗಿದ್ದು ಯುವಜನತೆ ಉದಾತ್ತ ಸಂಸ್ಕಾರ, ದೇಶಾಭಿಮಾನವನ್ನು ರೂಢಿಸಿಕೊಂಡು ಜೀವನದಲ್ಲಿ ಮುನ್ನಡೆಯುವ ಜೊತೆಗೆ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ಎನ್.ಎಸ್.ಎಸ್ ಕೋಶದ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ನಾಮದೇವ.ಎಮ್.ಗೌಡಾ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಅಕ್ಷಯ ಯಾರ್ದಿ ಸ್ವಾಗತಿಸಿದರು.ಡಾ. ಕಲಾವತಿ ಕಾಂಬಳೆ ನಿರೂಪಿಸಿದರು. ಜೆನ್ನಿಫರ್ ಸೌಲಮ್ ವಂದಿಸಿದರು.

Event: Dr Rajiva gandi Birthday's - Good will (Sadbhavana) Program.

Date: 24/8/21 kannada prabha.

Dept: NSS KSAWUV

~~Res. person~~:

RP's 24/08/21

22/8/21

# ಉತ್ತಮ ಸಮಾಜ ನಿರ್ಮಾಣವಾಗಲಿ


## ಪೊಲೀಸ್ ಅಧೀಕ್ಷಕ ಬಿ.ಸ್. ನೇಮಗೌಡ ಸಲಹೆ | ಮಹಿಳಾ ವಿವಿಯಲ್ಲಿ ಭ್ರಷ್ಟಾಚಾರ ನಿಯಂತ್ರಣ ಕುರಿತು ಜಾಗೃತಿ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಭ್ರಷ್ಟಾಚಾರ ಮಾಡುವುದನ್ನು ನೋಡಿ ಸುಮ್ಮನಿರುವುದು ಅಪರಾಧ ಮಾಡಿದಂತೆ. ಸಮಾಜದಲ್ಲಿ ನಡೆಯುತ್ತಿರುವ ಯಾವುದೇ ರೀತಿಯ ಅನ್ಯಾಯದ ವಿರುದ್ಧ ಮಾತನಾಡಿದಾಗ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ ಎಂದು ಬೆಳಗಾವಿ ಉತ್ತರ ವಲಯ ಭ್ರಷ್ಟಾಚಾರ ನಿಗ್ರಹದಳದ ಪೊಲೀಸ್ ಅಧೀಕ್ಷಕ ಬಿ.ಸ್. ನೇಮಗೌಡ ಹೇಳಿದರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ದಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಭ್ರಷ್ಟಾಚಾರ ನಿಯಂತ್ರಣ ಕುರಿತು ಜಾಗೃತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ಕಾನೂನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಮುಂಬರುವ ಯುವ ಪೀಳಿಗೆ ಭ್ರಷ್ಟಾಚಾರದ ಬಲೆಯಲ್ಲಿ ತಪ್ಪಿತಸ್ಥರಾಗಬಾರದು ಮತ್ತು ಬಲಿಪಶುಗಳಾಗಬಾರದೆಂಬ ಉದ್ದೇಶದಿಂದ ಈ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಸಮಾಜದಲ್ಲಿರುವ ತಪ್ಪುಗಳನ್ನು, ಅನ್ಯಾಯವನ್ನು ತಡೆಯಲು ನಾವೇ ಮುಂದಾಗ ಬೇಕು. ಬೇರೆಯವರು ಬಂದು ನಮಗೆ ಸಹಾಯ ಮಾಡಲಿ ಎಂದು ಕೂರಬಾರದು. ನಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ಅವರು, ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಭ್ರಷ್ಟಾಚಾರವನ್ನು ನಿಯಂತ್ರಣದಲ್ಲಿರುವ ಜವಾಬ್ದಾರಿ ಸಮಾಜದಲ್ಲಿರುವ ಪ್ರತಿಯೊಬ್ಬರ ಮೇಲೆ ಇದೆ. ಭ್ರಷ್ಟಾಚಾರ ನಿರ್ಮೂಲನೆಯನ್ನು ಮೂಲಭೂತ ಕರ್ತವ್ಯ ಎಂದು ತಿಳಿದು ಕೆಲಸ ಮಾಡಬೇಕು. ಆಗ ಮಾತ್ರ ಸ್ವಸ್ಥ ಸಮಾಜ ನಿರ್ಮಿಸಲು ಸಾಧ್ಯ ಎಂದರು. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ. ಸಕ್ಪಾಲ ಹೂವಣ್ಣ, ಡಿವೈಎಸ್‌ಪಿ ಮಂಜುನಾಥ ಕೆ. ಗಂಗಲ್, ಡಾ. ಅನಿತಾ ನಾಟೀಕರ, ಡಾ. ಹನುಮಂತಯ್ಯ ಪೂಜಾರಿ ಇತರರು ಕಾರ್ಯಕ್ರಮದಲ್ಲಿದ್ದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಭ್ರಷ್ಟಾಚಾರ ನಿಯಂತ್ರಣ ಕುರಿತು ಜಾಗೃತಿ' ಕಾರ್ಯಕ್ರಮವನ್ನು ಬೆಳಗಾವಿ ಉತ್ತರ ವಲಯ ಭ್ರಷ್ಟಾಚಾರ ನಿಗ್ರಹದಳದ ಪೊಲೀಸ್ ಅಧೀಕ್ಷಕ ಬಿ.ಸ್. ನೇಮಗೌಡ ಉದ್ಘಾಟಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ. ಸಕ್ಪಾಲ ಹೂವಣ್ಣ, ಡಾ. ಅನಿತಾ ನಾಟೀಕರ ಇದ್ದರು.

ವಿಜಯವಾಣಿ ದಿ 16-2-2021 ಪು-2

7.1.9 (4A)

Event: Programme on Corruption free Society
Date: 16/02/2021, Vijayavani, Page 2
Dept: DSW
Resource Person: B.S. Nema Gouda

16/2/21

VC office 16/02/2021

7.1.9(4A)

# ರಾಷ್ಟ್ರೀಯ ಏಕತಾ ದಿವಸ ಆಚರಣೆ



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿ.ವಿ.ಯಲ್ಲಿ ರಾಷ್ಟ್ರೀಯ ಏಕತಾ ದಿವಸ ಆಚರಿಸಲಾಯಿತು.

ವಿಜಯಪುರ : ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶವು ಸರ್ದಾರ ವಲ್ಲಭಬಾಯಿ ಪಟೇಲ ಅವರ ಜನ್ಮದಿನದ ಅಂಗವಾಗಿ 'ರಾಷ್ಟ್ರೀಯ ಏಕತಾ ದಿವಸ' ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವೆ ಪ್ರೊ. ಆರ್.ಸುನಂದಮ್ಮ, ರಾಷ್ಟ್ರದ ಐಕ್ಯತೆಗಾಗಿ ಹಾಗೂ ಭಾರತ ಸ್ವಾತಂತ್ರ್ಯ ನಂತರ ಅನೇಕ ಸಂಸ್ಥಾನಗಳನ್ನು ವಿಲಿನಿಕರಣ ಮಾಡಿದ ಕೀರ್ತಿ ಸರ್ದಾರ ಪಟೇಲರಿಗೆ ಸಲ್ಲುತ್ತದೆ. ಆದಕ್ಕಾಗಿ ಅವರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ. ರಮೇಶ. ಕೆ, ಆರ್ಥಿಕ ಅಧಿಕಾರಿ ಪ್ರೊ. ಎಸ್.ಬಿ. ಕಾಮಶೆಟ್ಟಿ, ಕಾರ್ಯಕ್ರಮ ಅಧಿಕಾರಿ ಡಾ.ವಿಷ್ಣು ಶಿಂಧೆ, ಅಕ್ಷಯ ಯಾರ್ದಿ, ಎನ್.ಎಸ್.ಎಸ್ ಕೋಶದ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ನಾಮದೇವ ಗೌಡಾ ಪ್ರತಿಜ್ಞಾ ವಿಧಿ ಬೋಧಿಸಿದರು. ಡಾ. ಕಲಾವತಿ ಕಾಂಬಳೆ ಕಾರ್ಯಕ್ರಮ ನಿರೂಪಿಸಿದರು. ಜೆನಿಫರ್ ಸೌಲಮ್ ವಂದಿಸಿದರು.

ಸಭೆಯಲ್ಲಿ ವಿಶ್ವವಿದ್ಯಾನಿಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

Event : Celebration of National Integration day.

Date : 2.11.2021.

Resource person : Registrar.

Dept : NSS wing.

7.1.9 (4P.)

ಕನ್ನಡ ಪ್ರಭ. ದಿ. 24/12/21 ಪು-08

# ಮಹಿಳೆಯರಿಗೆ ಕಾನೂನು ಅರಿವು ಅಗತ್ಯ

## ಅಕ್ಕ ಮಹಾದೇವಿ ಮಹಿಳಾ ವಿವಿಯಲ್ಲಿ ಕಾನೂನು ಅರಿವು ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲ ಅಭಿಮತ

• ಕನ್ನಡಪ್ರಭ ವಾರ್ತೆ ವಿಜಯಪುರ

ಮಹಿಳೆ ಹಕ್ಕುಗಳ ಉಲ್ಲಂಘನೆಯಾದಾಗ ಅದರ ವಿರುದ್ಧ ಧ್ವನಿ ಎತ್ತಲು ಮಹಿಳೆಯರಿಗೆ ಕಾನೂನಿನ ಅರಿವು ಅಗತ್ಯ. ಮಹಿಳಾ ಸಬಲೀಕರಣದ ಮುಂದುವರಿಕೆಗೆ ಬೇಕಾದ ಮಹಿಳಾ ಹಕ್ಕುಗಳ ಪ್ರತಿಪಾದನೆಗೆ ಇರುವ ಕಾನೂನು ವ್ಯವಸ್ಥೆಗಳೇನು, ಮಹಿಳಾ ಆಯೋಗದ ಕರ್ತವ್ಯಗಳೇನು ಎಂಬುದನ್ನು ತಿಳಿಯಲು ಮತ್ತು ಮಹಿಳೆಯರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಇಂತಹ ಕಾರ್ಯಾಗಾರಗಳು ಉಪಯುಕ್ತವಾಗಿವೆ ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ ಹೇಳಿದರು.

ಗುರುವಾರ ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಹಲ್ಯಾ ಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಸಹಯೋಗದಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆ ಹೆಚ್ಚಾಗಿ ಖಾಸಗಿ ವಲಯದಲ್ಲಿ ಸಕ್ರಿಯಳಾಗಿರುವುದರಿಂದ ಅವಳು ಎದುರಿಸುವ ಸಮಸ್ಯೆಗಳು, ಶೋಷಣೆ, ದೌರ್ಜನ್ಯ ಹೆಚ್ಚು ಚರ್ಚೆಗೆ ಬರುವುದಿಲ್ಲ. ಮಹಿಳೆಯರ ವಿಷಯದಲ್ಲಿ ಸಂಕೀರ್ಣತೆ ಇರುವುದರಿಂದ ಅವರಿಗೆ ಮಹಿಳಾ ಕಾನೂನುಗಳ ಕ್ರಮಬದ್ಧವಾದ ಮಾಹಿತಿ ಅವಶ್ಯಕವಾಗಿದೆ ಎಂದರು.



ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ಕರ್ನಾಟಕರಾಜ್ಯ ಮಹಿಳಾ ಆಯೋಗದ ಸಹಯೋಗದಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ಉದ್ಘಾಟಿಸಿದರು.

ಉದ್ಯೋಗ ಸ್ಥಳದಲ್ಲಿನ ಹಕ್ಕುಗಳು, ಸಾಂಸ್ಥಿಕ ಕಾನೂನುಗಳು, ಸಮಾನ ವೇತನ, ಕೌಟುಂಬಿಕ ಕಾನೂನು ಶೋಷಣೆಯ ವಿರುದ್ಧ ಪ್ರಶ್ನಿಸುವ ಹಕ್ಕಿನ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಮಹಿಳೆಯರಲ್ಲಿ ಕಾನೂನಿನ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಅವರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಹಿನ್ನೆಲೆಯ ಬಗ್ಗೆ ತಿಳಿದುಕೊಳ್ಳುವುದು ಸಹ ಅತ್ಯವಶ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಿಳಾ ಆಯೋಗದ ಅಧ್ಯಕ್ಷೆ ಆರ್.ಪ್ರಮೀಳಾ ನಾಯ್ಡು, ಮಹಿಳೆಯರ ಸಮಾನತೆಗೆ ಹಿಂದಿನಿಂದಲೂ ಹೋರಾಟ ನಡೆಯುತ್ತಲೆ ಬಂದಿದೆ. ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗಾಗಿಯೇ ಮಹಿಳಾ ಆಯೋಗ ಶ್ರಮಿಸುತ್ತಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಖಿನ್ನತೆ, ಶೋಷಣೆ, ದೌರ್ಜನ್ಯ ಹೀಗೆ ಅನೇಕ ರೀತಿಯ ಸಮಸ್ಯೆಗಳಲ್ಲಿ ಸಿಲುಕಿ ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ಅಂತಹ ಮಹಿಳೆಯರಿಗೆ ಕಾನೂನುಗಳ ಬಗ್ಗೆ ತಿಳಿಸುವುದು ಇಂತಹ ಕಾರ್ಯಾಗಾರಗಳ ಉದ್ದೇಶವಾಗಿದೆ ಎಂದರು.

> ನಾವು ಜೀವನದಲ್ಲಿ ಕಷ್ಟಗಳನ್ನು ಮೆಟ್ಟಿ ನಿಂತಾಗ ಮಾತ್ರ ಸಾಧಕರಾಗಲು ಸಾಧ್ಯ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಕಟ್ಟಕಡೆಯ ಮಹಿಳೆಗೂ ಶಿಕ್ಷಣ ದೊರೆಯಬೇಕು. ಆಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ. ಮಹಿಳೆ ತಾನು ಸ್ವಾವಲಂಬಿಯಾಗಿ ಸುಂದರ ಬದುಕು ಕಟ್ಟಿಕೊಂಡು ಎಲ್ಲರಿಗೂ ಮಾದರಿಯಾಗಬೇಕು.
>
> • ಆರ್.ಪ್ರಮೀಳಾ ನಾಯ್ಡು ಮಹಿಳಾ ಆಯೋಗದ ಅಧ್ಯಕ್ಷೆ

ಮಹಿಳಾ ವಿವಿಯ ಕುಲಸಚಿವ ಪ್ರೊ. ಆರ್. ಸುನಂದಮ್ಮ, ಮಹಿಳಾ ಆಯೋಗದ ಕಾರ್ಯಾಧಿಕಾರಿ ದಿನಕರ ಶೆಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಕೆ.ಚವ್ಹಾಣ, ಸಿಪಿಐ ಸಂಗಮೇಶ, ಹಾಲಭಾವಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಹಿಳಾ ವಿವಿಯ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಸಂಗೀತ ವಿಭಾಗದ ವಿದ್ಯಾರ್ಥಿನಿಯರು ನಾಡಗೀತೆ ಮತ್ತು ವಿಶ್ವವಿದ್ಯಾನಿಲಯದ ಧ್ಯೇಯಗೀತೆ ಹಾಡಿದರು. ಮಹಿಳಾ ಆಯೋಗದ ಕಾರ್ಯದರ್ಶಿ ಶೋಭಾ.ಟಿ.ಆರ್.ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕಿ ಡಾ. ಲಕ್ಷ್ಮೀದೇವಿ.ವೈ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಶೋಧನಾ ವಿದ್ಯಾರ್ಥಿನಿ ಶೈಲಾ ಬಳಗಾನೂರ ವಂದಿಸಿದರು. ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಭಾರತಿ ಗಾಣಗೇರ ಕಾರ್ಯಕ್ರಮವನ್ನು ನಿರೂಪಿಸಿದರು.

Event: Program on Laws and Regulations
Date: 24/12/2021, Kannada Prabha, Page-08
Department: Women Studies
Resource Person: Prof. B.K. Tulasi Mala

7.1.9(4A)

ಸಂಯುಕ್ತ ಕರ್ನಾಟಕ ದಿ. 10/2/22 ಪು-03



ಬುರ್ಗಿ ವಿ.ವಿ. ಸಿಂಡಿಕೇಟ್ ಸದಸ್ಯ ಸಂಗಮೇಶ ಪೂಜಾರಿ ವಿಶೇಷ ಉಪನ್ಯಾಸ ನೀಡಿದರು.

# ನೇತಾಜಿ ದೇಶ ಕಂಡ ಅಪ್ರತಿಮ ಸೇನಾನಿ

ಜಯಪುರ: ನೇತಾಜಿ ಎಂದೆ ಪ್ರಸಿದ್ಧರಾಗಿದ್ದ ಸುಭಾಷ್ ಚಂದ್ರ ಬೋಸ್‌ರು ಬ್ರಿಟಿಷರಿಂದ ರತದ ಕೆಲ ಭೂಪ್ರದೇಶ ವಶಪಡಿಸಿಕೊಂಡು ಮೊದಲ ಪ್ರಧಾನಿಯಾಗಿದ್ದರು. ಅವರು ರತ ಕಂಡ ಅಪ್ರತಿಮ ಸೇನಾನಿ. ಅವರ ಕ್ರಾಂತಿಕಾರಿ ಹೋರಾಟಗಳು, ನಿಲುವುಗಳು ಯುವಪೀಳಿಗೆಗೆ ಮಾದರಿ ಎಂದು ಕಲಬುರ್ಗಿ ವಿ.ವಿ. ಸಿಂಡಿಕೇಟ್ ಸದಸ್ಯ ಸಂಗಮೇಶ ಜಾರಿ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಜ್ಯಶಾಸ್ತ್ರ ವಿಭಾಗ ಮತ್ತು ಭಾರತಿಯ ಶಿಕ್ಷಣ ಮಂಡಲ ಕರ್ನಾಟಕ ಉತ್ತರ ಪ್ರಾಂತ ವರ ಸಂಯುಕ್ತ ಆಶ್ರಯದಲ್ಲಿ ಸುಭಾಷ್ ಚಂದ್ರ ಬೋಸ್‌ರ 125ನೇ ಜಯಂತಿಯ ಂಗವಾಗಿ ಹಮ್ಮಿಕೊಂಡಿದ್ದ 'ನೇತಾಜಿಯವರು ಕಂಡ ಕನಸಿನ ಭಾರತ' ಎಂಬ ವಿಷಯದ ರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಸುಭಾಸಚಂದ್ರ ಭೋಸ್ ಅವರ ಆದರ್ಶಗಳನ್ನು ನಾವು ಮೈಗೂಡಿಸಿಕೊಳ್ಳಬೇಕು, ವರ ನಿಲುವು, ವಿಚಾರಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಂದರು. ಮಹಿಳಾ ವಿವಿಯ ಕುಲಸಚಿವ ಎಂ.ಎನ್. ಚೋಗರಸ್ತಿ ,ಮಹಿಳಾ ವಿವಿಯ ಲಪತಿ ಪ್ರೊ. ಬಿ.ಕೆ. ತುಳಸಿಮಾಲಾ ಮಾತನಾಡಿದರು.

ಪ್ರೊ. ಡಿ.ಎಂ. ಮದರಿ, ಪ್ರೊ. ನಾಮದೇವ ಗೌಡ, ಡಾ. ಶ್ರೀಮತಿ ರಾಜು ಾಗಲಕೋಟ, ಡಾ. ಆನಂದ ಕುಲಕರ್ಣಿ, ಡಾ. ಹನುಮಂತಯ್ಯ ಪೂಜಾರಿ, ಡಾ. ಲಾಬ ರಾಠೊಡ, ಸೇರಿದಂತೆ ವಿವಿಯ ವಿವಿಧ ವಿಭಾಗಗಳ ಪ್ರಾಧ್ಯಪಕರು, ದ್ಯಾರ್ಥಿನಿಯರು ಇದ್ದರು. ಡಾ. ರಮೇಶ ಸೋನಕಾಂಬಳೆ, ಡಾ. ರಾಜಕುಮಾರ ಾಲಿಪಾಟೀಲ, ಡಾ. ಸಂಗಮೇಶ ಮೇತ್ರಿ, ಡಾ. ಸತೀಶ ಪಾಟೀಲ, ಡಾ. ಯಲ್ಲಪ್ಪಾ ಂಬಿನೂರ, ಡಾ. ಅಶ್ವಿನಿ ಕಾರ್ಯಕ್ರಮ ನಿರ್ವಹಿಸಿದರು.

O/c
Pyrmawik
10-02-22

10/2/2022

V.B.P

Event: 125th Birth Anniversary of Subhash Chandra Bose

Date: 10/2/22, Samyukta Karnataka, Page 3.

Dept: Political Science department

Resource Person: Sangamesh Pujari.